**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.**

**ಸಿ.ಸಿ. ನಂ.373/2025.**

ಪಿರ್ಯಾದುದಾರರುಃ- ಮಂಕಿ ಪೊಲೀಸ್ ಠಾಣೆ ,
ಮಂಕಿ,
ತಾಲೂಕುಃ- ಹೊನ್ನಾವರ (ಉ.ಕ.).

**- ವಿರುದ್ಧ -**

ಆರೋಪಿತರುಃ- 1. ತಿಮ್ಮಪ್ಪ ತಂದೆ ರಾಮಾ ಗೌಡ,
ಪ್ರಾಯ ಸುಮಾರುಃ- 62 ವರ್ಷ,
ವೃತ್ತಿಃ- ನಿವೃತ್ತ ಶಿಕ್ಷಕ,
ಹಾಲಿಃ ಅಂಗಡಿ ವ್ಯಾಪಾರ,
ಸಾಕೀನಃ- ಕೆಳಗಿನೂರು, ಹೊಳ್ಳಾಕುಳಿ,
ತಾಲೂಕುಃ- ಹೊನ್ನಾವರ.

2. ಶ್ರೀಮತಿ ಶಾಂತಿ ತಿಮ್ಮಪ್ಪ ಗೌಡ,
ಪ್ರಾಯ ಸುಮಾರುಃ- 55 ವರ್ಷ,
ವೃತ್ತಿಃ- ಮನೆ ಕೆಲಸ,
ಸಾಕೀನಃ- ಕೆಳಗಿನೂರು, ಹೊಳ್ಳಾಕುಳಿ,
ತಾಲೂಕುಃ- ಹೊನ್ನಾವರ.

*****

## ಆಪಾದನೆ

ಶ್ರೀ ಅನಿಲ್ ಜೋನ್ ಸಿಕ್ವೇರಾ., ಬಿ.ಬಿ.ಎ.,ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆ ಹೊರಿಸುತ್ತಿದ್ದೇನೆ.

ದಿನಾಂಕ 08/01/2025 ರಂದು ಬೆಳಿಗ್ಗೆ 9.45 ಗಂಟೆಯ ಸುಮಾರಿಗೆ ಮಂಕಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಹೊನ್ನಾವರ ತಾಲೂಕಿನ ಕೆಳಗಿನೂರು ಗ್ರಾಮದ ಹೊಳ್ಳಾಕುಳಿಯಲ್ಲಿ ಹಾಯಿದ್ದುವ ರಾಷ್ಟ್ರೀಯ ಹೆದ್ದಾರಿ-66 ರ ಹೊನ್ನಾವರ-ಭಟ್ಕಳ

ಮಾರ್ಗದ ರಸ್ತೆಯ ಸುಮಾರು 08 ಫೂಟ್ ಅಂತರಕ್ಕೆ ಹಾಯ್ದಿರುವ ಮಣ್ಣಿನ ರಸ್ತೆಯಲ್ಲಿ ಪಿರ್ಯಾದಿಯವರು ನಡೆದುಕೊಂಡು ಹೋಗುತ್ತಿದ್ದಾಗ 1 ಮತ್ತು 2 ನೇ ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಪಿರ್ಯಾದಿಯವರಿಗೆ ಬೋಳಿಮಗನೇ, ಸೂಳೆಮಗನೇ ಎಂದು ಅವಾಚ್ಯ ಶಬ್ಧಗಳಿಂದ ಬೈದಿದ್ದು, ಅದರ ಮೂಲಕ ಪಿರ್ಯಾದಿಯವರಿಗೆ ಅವಮಾನ ಮಾಡಿ ಆ ಮೂಲಕ ಪಿರ್ಯಾದಿಗೆ ಉದ್ರೇಕವನ್ನುಂಟು ಮಾಡಿ, ಪಿರ್ಯಾದಿಗೆ ಶಾಂತಿ ಭಂಗವನ್ನು ಉಂಟು ಮಾಡುವ ಉದ್ದೇಶದಿಂದ ಆತನಿಗೆ ಅವಮಾನ ಮಾಡಿರುತ್ತೀರಿ, ಈ ಮೂಲಕ ಆರೋಪಿತರಾದ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ. 352 ಸಹಿತ 3(5)** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ1 : ಈಗ ನಿಮಗೆ ಓದಿ ಹೇಳಿದ ಆರೋಪಣೆ ತಿಳಿಯಿತೆ?

1 ಮತ್ತು 2 ನೇ ಆರೋಪಿತರ ಉತ್ತರ : ತಿಳಿಯಿತು.

ಪ್ರಶ್ನೆ 2 : ಸದ್ರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

1 ಮತ್ತು 2 ನೇ ಆರೋಪಿತರ ಉತ್ತರ : ಒಪ್ಪಿಕೊಳ್ಳುತ್ತೇನೆ.

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿತರು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ )

**ಸಹಿ ಇದೆ/-**

**ದಿನಾಂಕಃ- 15-04-2025.**

**(ಅನಿಲ್ ಜೋನ್ ಸಿಕ್ವೇರಾ).,**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.**

1 ನೇ ಆರೋಪಿಯ ಸಹಿಃ- ಸಹಿ ಇದೆ

2 ನೇ ಆರೋಪಿಯ ಸಹಿಃ- ಸಹಿ ಇದೆ